## ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 295 ಮಾಹಿತಿ 2014

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 09.01.2015

### ತಿದ್ದುಪಡಿ ಮತ್ತು ಸೇರ್ಪಡೆ ಆದೇಶ

| | |
|---|---|
| ವಿಷಯ | ಎಸ್‌ಎಸ್‌ಎಲ್‌ಸಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ 2014-15ನೇ ಸಾಲಿನಿಂದ ಜಾರಿಗೆ ಬರುವಂತೆ (2015 ಮಾರ್ಚ್ ಪರೀಕ್ಷೆಯಿಂದ) ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ನಿರಂತರ ಹಾಗೂ ಸಮಗ್ರ ಮೌಲ್ಯಮಾಪನ (ಸಿಸಿಇ) ಪದ್ಧತಿಯನ್ನು ಅಳವಡಿಸುವ ಬಗ್ಗೆ. |
| ಉಲ್ಲೇಖ | 1. ಸರ್ಕಾರದ ಆದೇಶ ಸಂಖ್ಯೆ: ಇಡಿ 156 ಮಾಹಿತಿ 2014, ಬೆಂಗಳೂರು ದಿನಾಂಕ 26.06.2014<br>2. ನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು ರವರ ಪತ್ರ ಸಂಖ್ಯೆ: ಸಿ1/(ಸಿಸಿಇ)/ಹೊ.ಪ.ಪು/2011-12 ದಿನಾಂಕ: 01.01.2015 |

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖದ (1) ರ ಆದೇಶದ ಭಾಗದಲ್ಲಿನ ಕಂಡಿಕೆ ಸಂಖ್ಯೆ 8(6), 18ರಲ್ಲಿನ ಅಂಶಗಳನ್ನು ಕೆಳಗೆ ತಿಳಿಸಿರುವಂತೆ ತಿದ್ದುಪಡಿ ಮಾಡಿಕೊಂಡು ಹಾಗೂ ಸೇರ್ಪಡೆ ಕ್ರಮ ಸಂಖ್ಯೆ 1, 2, & 3 ರಲ್ಲಿನ ಮಾಹಿತಿಗಳನ್ನು ಮೂಲ ಆದೇಶದ ಮಾನದಂಡಗಳ ಜೊತೆಯಲ್ಲಿ ಸೇರಿಸಿಕೊಂಡು ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

### ತಿದ್ದುಪಡಿ

| ಕಂಡಿಕೆ ಸಂಖ್ಯೆ | ಆದೇಶದಲ್ಲಿರುವ ಕಂಡಿಕೆಯಲ್ಲಿರುವ ಅಂಶಗಳು | ತಿದ್ದುಪಡಿ ಮಾಡಿ ಓದಿಕೊಳ್ಳಬೇಕಾದ ಅಂಶಗಳು |
|---|---|---|
| 8(6) | ಭಾಗ 'ಎ' ಯಲ್ಲಿ ಬರುವ ಪ್ರತಿ ವಿಷಯಗಳಿಗೆ ಅಂಕಗಳು ಹಾಗೂ ಶ್ರೇಣಿಗಳನ್ನು ನೀಡಿ ಒಟ್ಟಾರೆ ಅಂಕಗಳು ಮತ್ತು ಶ್ರೇಣಿ Cumulative Grade Point Average (CGPA)) ಯನ್ನು ನೀಡತಕ್ಕದ್ದು | 2014-15ನೇ ಶೈಕ್ಷಣಿಕ ವರ್ಷದಿಂದ ಸಿ.ಸಿ.ಇ ಪದ್ಧತಿಯು ಪ್ರಾರಂಭವಾಗಿದ್ದು, ಗ್ರಾಮೀಣ ಪ್ರದೇಶದ ಮಕ್ಕಳ ಹಿತದೃಷ್ಟಿಯಿಂದ ಅಂಕಗಳು ಮತ್ತು ಶ್ರೇಣಿ ನೀಡುವುದರಿಂದ CGPA ಯನ್ನು CGA ಎಂಬುದಾಗಿ ತಿದ್ದುಪಡಿ ಮಾಡಿದೆ. |

**ಅಂಕಗಳು ಮತ್ತು ಶ್ರೇಣಿಗಳ ವಿವರ**

ಒಟ್ಟು 625 ಅಂಕಗಳಿಗೆ

| ಅಂಕಗಳು | ಶೇಕಡ | ಶ್ರೇಣಿ |
|---|---|---|
| 562-625 | 90-100 | A+ |
| 500-561 | 80-89 | A |
| 437-499 | 70-79 | B+ |
| 375-436 | 60-69 | B |
| 312-374 | 50-59 | C+ |
| 219-311 | 30-49 | C |

**ಪರಿಷ್ಕೃತ ಅಂಕಗಳು ಮತ್ತು ಶ್ರೇಣಿಗಳ ವಿವರ**

ಒಟ್ಟು 625 ಅಂಕಗಳಿಗೆ

| ಅಂಕಗಳು | ಶೇಕಡ | ಶ್ರೇಣಿ |
|---|---|---|
| 563-625 | 90 ರಿಂದ 100 | A+ |
| 500-562 | 80 ರಿಂದ 90 ವರೆಗೆ | A |
| 438-499 | 70 ರಿಂದ 80 ವರೆಗೆ | B+ |
| 375-437 | 60 ರಿಂದ 70 ವರೆಗೆ | B |
| 313-374 | 50 ರಿಂದ 60 ವರೆಗೆ | C+ |
| 219-312 | 35 ರಿಂದ 50 ವರೆಗೆ | C |

09/01/2015 9/1/15

ಒಟ್ಟು 100 ಅಂಕಗಳಿಗೆ

| ಅಂಕಗಳು | ಶ್ರೇಣಿ |
|---|---|
| 90–100 | A+ |
| 80–89 | A |
| 70–79 | B+ |
| 60–69 | B |
| 50–59 | C+ |
| 30–49 | C |

ಒಟ್ಟು 125 ಅಂಕಗಳಿಗೆ

| ಅಂಕಗಳು | ಶೇಕಡ | ಶ್ರೇಣಿ |
|---|---|---|
| 112–125 | 90–100 | A+ |
| 100–111 | 80–89 | A |
| 87–99 | 70–79 | B+ |
| 75–86 | 60–69 | B |
| 62–74 | 50–59 | C+ |
| 38–61 | 30–49 | C |

ಒಟ್ಟು 100 ಅಂಕಗಳಿಗೆ

| ಅಂಕಗಳು | ಶೇಕಡ | ಶ್ರೇಣಿ |
|---|---|---|
| 90–100 | 90 ರಿಂದ 100 | A+ |
| 80–89 | 80 ರಿಂದ 90 ವರೆಗೆ | A |
| 70–79 | 70 ರಿಂದ 80 ವರೆಗೆ | B+ |
| 60–69 | 60 ರಿಂದ 70 ವರೆಗೆ | B |
| 50–59 | 50 ರಿಂದ 60 ವರೆಗೆ | C+ |
| 35–49 | 35 ರಿಂದ 50 ವರೆಗೆ | C |

ಒಟ್ಟು 125 ಅಂಕಗಳಿಗೆ

| ಅಂಕಗಳು | ಶೇಕಡ | ಶ್ರೇಣಿ |
|---|---|---|
| 113–125 | 90 ರಿಂದ 100 | A+ |
| 100–112 | 80 ರಿಂದ 90 ವರೆಗೆ | A |
| 88–99 | 70 ರಿಂದ 80 ವರೆಗೆ | B+ |
| 75–87 | 60 ರಿಂದ 70 ವರೆಗೆ | B |
| 63–74 | 50 ರಿಂದ 60 ವರೆಗೆ | C+ |
| 44–62 | 35 ರಿಂದ 50 ವರೆಗೆ | C |

- ಬಾಹ್ಯ ಮತ್ತು ಆಂತರಿಕ ಮೌಲ್ಯಮಾಪನದಲ್ಲಿ ಗಳಿಸಿರುವ ಒಟ್ಟಾರೆ ಅಂಕಗಳು 219ಕ್ಕಿಂತ ಕಡಿಮೆ ಇದ್ದಲ್ಲಿ "NC" (Not Completed) ಶ್ರೇಣಿ ಎಂದು ಪರಿಗಣಿಸಿದೆ. "NC" ಶ್ರೇಣಿಯಲ್ಲಿ ಬರುವ ವಿದ್ಯಾರ್ಥಿಗಳು ತೇರ್ಗಡೆಗೆ ಅರ್ಹರಿರುವುದಿಲ್ಲ. ("NC"ಅಂದರೆ ಅನುತ್ತೀರ್ಣರಾದವರು) ಈ ವಿದ್ಯಾರ್ಥಿಗಳು ನಂತರದ ಪ್ರಯತ್ನಗಳಲ್ಲಿ ಬಾಹ್ಯ ಪರೀಕ್ಷೆಗಳಲ್ಲಿ ಕುಳಿತು ಪ್ರತಿ ವಿಷಯದಲ್ಲಿ ಶೇ 30ಕ್ಕಿಂತ ಅಧಿಕ ಮತ್ತು ತೇರ್ಗಡೆಯಾಗಲು ಒಟ್ಟಾರೆ ಶೇ.35ರಷ್ಟು ಅಂಕಗಳನ್ನು ಗಳಿಸುವುದು ಕಡ್ಡಾಯ.
- ಅನುತ್ತೀರ್ಣರಾದ ವಿದ್ಯಾರ್ಥಿಗಳ ಫಲಿತಾಂಶಗಳಲ್ಲಿ ಶೇ.35ಕ್ಕಿಂತ ಕಡಿಮೆ ಇರುವ ವಿಷಯಗಳಿಗೆ "NC" ಶ್ರೇಣಿ ಎಂದು ಪರಿಗಣಿಸತಕ್ಕದ್ದು.

09/01/2015

| | | | |
|---|---|---|---|
| 18 | ವಿದ್ಯಾರ್ಥಿಗಳ ತೇರ್ಗಡೆಗೆ ಅಂತಿಮ ಫಲಿತಾಂಶವನ್ನು ನಿರ್ಧರಿಸುವಾಗ (ಪರೀಕ್ಷಾ ಮಂಡಳಿ ನಡೆಸುವ) ಬಾಹ್ಯ ಪರೀಕ್ಷೆಯಲ್ಲಿ ಪ್ರತಿ ವಿಷಯದಲ್ಲೂ ಕನಿಷ್ಠ ಶೇಕಡ 30 ರಷ್ಟು ಅಂಕಗಳನ್ನು ಒಟ್ಟಾರೆ ಶೇಕಡ 35 ಅಂಕಗಳನ್ನು ಪಡೆದಿರತಕ್ಕದ್ದು. | ಸರ್ಕಾರಿ ಆದೇಶ ಸಂಖ್ಯೆ:ಇಡಿ156 ಮಾಹಿತಿ 2015 ಬೆಂಗಳೂರು ದಿನಾಂಕ:26.06.2014ರ ಕಂಡಿಕೆ 10, 11 ಹಾಗೂ 17ನ್ನು ಸ್ಥಿರೀಕರಿಸುತ್ತಾ ಕಂಡಿಕೆ 18ನ್ನು ಕೆಳಗಿನಂತೆ ತಿದ್ದುಪಡಿ ಮಾಡಿದೆ.<br>▪ ವಿದ್ಯಾರ್ಥಿ ತೇರ್ಗಡೆಯಾಗಲು ಬಾಹ್ಯ ಪರೀಕ್ಷೆಯಲ್ಲಿ ಪ್ರತಿ ವಿಷಯದಲ್ಲಿ ಕನಿಷ್ಠ ಶೇಕಡ 30,ಹಾಗೂ ಬಾಹ್ಯ ಪರೀಕ್ಷೆಯ ಎಲ್ಲಾ ವಿಷಯಗಳ ಸರಾಸರಿ ಶೇ.35 ಹಾಗೂ ಬಾಹ್ಯ ಪರೀಕ್ಷೆ ಮತ್ತು ಅಂತರಿಕ ಮೌಲ್ಯಮಾಪನದ ಎಲ್ಲಾ ವಿಷಯಗಳ ಸರಾಸರಿ ಶೇಕಡ 35 ಆಗಿರಬೇಕು.<br>▪ ಬಾಹ್ಯ ಪರೀಕ್ಷೆ ಮತ್ತು ಅಂತರಿಕ ಮೌಲ್ಯಮಾಪನದಲ್ಲಿ ವಿಷಯವಾರು ಅಂಕಗಳು ಶೇ.30 ರಿಂದ 35 ಗಳಿಸಿದ್ದು, ಒಟ್ಟಾರೆ ಶೇಕಡ 35 ಪಡೆದು ಉತ್ತೀರ್ಣರಾಗಿದ್ದಲ್ಲಿ ಅಂತಹ ವಿಷಯಗಳಿಗೆ "C" ಶ್ರೇಣಿ ಎಂದು ಪರಿಗಣಿಸತಕ್ಕದ್ದು.<br>▪ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ವಿಷಯವಾರು ಬಾಹ್ಯ ಪರೀಕ್ಷೆಯಲ್ಲಿ ಶೇ.35 ಅಂಕಗಳಿಸಿ ಉತ್ತೀರ್ಣರಾಗಿದ್ದರೂ, ಬಾಹ್ಯ ಮತ್ತು ಆಂತರಿಕ ಮೌಲ್ಯಮಾಪನಗಳ ಒಟ್ಟಾರೆ ಶೇ.35 ಕ್ಕಿಂತ ಕಡಿಮೆ ಇದ್ದಲ್ಲಿ ಅಯಾ ವಿಷಯಗಳ ಆಂತರಿಕ ಮೌಲ್ಯಮಾಪನದ ಅಂಕಗಳನ್ನು ಉತ್ತಮ ಪಡಿಸಿಕೊಳ್ಳಲು ಸಾಧ್ಯವಿಲ್ಲದ ಕಾರಣ ಬಾಹ್ಯ ಪರೀಕ್ಷೆಯಲ್ಲಿ ಅಂಕಗಳನ್ನು ಉತ್ತಮ ಪಡಿಸಿಕೊಂಡು ಆ ವಿಷಯದ ಒಟ್ಟಾರೆ ಅಂಕ ಶೇ.35 ಗಳಿಸಬೇಕು. |

**ಆದೇಶದ ಸಂಬಂಧಿತ ಭಾಗದಲ್ಲಿ ಈ ಕೆಳಕಂಡ ಅಂಶಗಳನ್ನು ಸೇರ್ಪಡೆ ಮಾಡಿಕೊಂಡು ಓದಿಕೊಳ್ಳತಕ್ಕದ್ದು.**

1. ಐಚ್ಛಿಕ ವಿಷಯಗಳಾದ ಗಣಿತ ಮತ್ತು ವಿಜ್ಞಾನ ವಿಷಯಗಳಿಗೆ ಪರ್ಯಾಯವಾಗಿ ಭಾರತೀಯ ಸಮಾಜ ಶಾಸ್ತ್ರ, ಭಾರತೀಯ ಅರ್ಥಶಾಸ್ತ್ರ, ಭಾರತೀಯ ರಾಜ್ಯ ಶಾಸ್ತ್ರ ಮತ್ತು ಪೌರ ನೀತಿ ಹಾಗೂ ಕರ್ನಾಟಕ/ಹಿಂದೂಸ್ತಾನಿ ಸಂಗೀತ ಇವುಗಳಿಗೂ ಸಹ ಸಿಸಿಇ ಪದ್ದತಿ ಅನ್ವಯ ಅಗುತ್ತದೆ.

2. ಕಿರಿಯ ತಾಂತ್ರಿಕ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಹೆಚ್ಚುವರಿಯಾಗಿ 02 ತಾಂತ್ರಿಕ ವಿಷಯಗಳಿಗೆ 01 ಥಿಯರಿ ಮತ್ತೊಂದು ಪ್ರಾಯೋಗಿಕ ಪರೀಕ್ಷೆ ಇರುವ್ಯದರಿಂದ ಕಿರಿಯ ತಾಂತ್ರಿಕ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮೂರು ಭಾಷೆಗಳು ಹಾಗೂ ಮೂರು ಕೋರ್ ವಿಷಯಗಳಿಗೆ ಸಿ.ಸಿ.ಇ ಪದ್ಧತಿ ಅಳವಡಿಸವುದು. ಈ ವಿದ್ಯಾರ್ಥಿಗಳು ಹೆಚ್ಚುವರಿಯಾಗಿ ಅಧ್ಯಯನ ಮಾಡುವ ಈ ಕೆಳಗಿನ ತಾಂತ್ರಿಕ ವಿಷಯಗಳಿಗೆ ಹಳೆಯ ಪದ್ಧತಿ ಮುಂದುವರೆಯುತ್ತದೆ.
    1. ಎಲಿಮೆಂಟ್ಸ್ ಆಫ್ ಇಂಜಿನಿಯರಿಂಗ್
    2. ಇಂಜಿನಿಯರಿಂಗ್ ಡ್ರಾಯಿಂಗ್
    3. ಎಲಿಮೆಟ್ಸ್ ಆಪ್ ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್
    4. ಎಲಿಮೆಂಟ್ಸ್ ಆಫ್ ಕಂಪ್ಯೂಟರ್ ಸೈನ್ಸ್

**ತಾಂತ್ರಿಕ ವಿದ್ಯಾರ್ಥಿಗಳಿಗೆ ಅನುಸರಿಸಬೇಕಾದ ಶ್ರೇಣಿಗಳ ವಿವರ**

**ಒಟ್ಟು 825 ಅಂಕಗಳಿಗೆ**

| ಅಂಕಗಳು | ಶೇಕಡ | ಶ್ರೇಣಿ |
|---|---|---|
| 743–825 | 90 ರಿಂದ 100 | A+ |

ಶ್ರೀ
05/01/2015

| | | |
|---|---|---|
| 660–742 | 80 ರಿಂದ 90 ವರೆಗೆ | A |
| 578–659 | 70 ರಿಂದ 80 ವರೆಗೆ | B+ |
| 495–577 | 60 ರಿಂದ 70 ವರೆಗೆ | B |
| 413–494 | 50 ರಿಂದ 60 ವರೆಗೆ | C+ |
| 289–412 | 35 ರಿಂದ 50 ವರೆಗೆ | C |

3. ಖಾಸಗಿ ಅಭ್ಯರ್ಥಿಗಳಿಗೆ(For Private Candidates)

✓ ಭಾಗ "ಎ" ಯ ಪಠ್ಯ ವಿಷಯಗಳಿಗಷ್ಟೇ ಅಂತಿಮ ಪರೀಕ್ಷೆಯನ್ನು ನಡೆಸಲಾಗುತ್ತಿದೆ.

**ಖಾಸಗಿ ಅಭ್ಯರ್ಥಿಗಳಿಗೆ ಪರೀಕ್ಷಾ ವಿವರ**

| ವಿಷಯಗಳು | ಅಂಕಗಳು |
|---|---|
| ಪ್ರಥಮ ಭಾಷೆ | 125 |
| ದ್ವಿತೀಯ ಭಾಷೆ | 100 |
| ತೃತೀಯ ಭಾಷೆ | 100 |
| ಗಣಿತ | 100 |
| ವಿಜ್ಞಾನ | 100 |
| ಸಮಾಜ ವಿಜ್ಞಾನ | 100 |
| ಒಟ್ಟು | 625 |

✓ ಆಂತರಿಕ ಮೌಲ್ಯಮಾಪನ ಹಾಗೂ ಭಾಗ 'ಬಿ' ಯ ಪರೀಕ್ಷೆಗಳಿರುವುದಿಲ್ಲ.

✓ ಭಾಗ "ಎ' ಯ ಪರೀಕ್ಷೆಯನ್ನು 625 ಅಂಕಗಳಿಗೆ ನಡೆಸುವುದು.

✓ ಮೇಲ್ಕಂಡಂತೆ, ಖಾಸಗಿ ಅಭ್ಯರ್ಥಿಗಳು ಶಾಲೆಗೆ ಹೋಗದೆ ನೇರವಾಗಿ ಬಾಹ್ಯ ಪರೀಕ್ಷೆಯನ್ನು ಒಟ್ಟು 625 ಅಂಕಗಳಿಗೆ ಪರೀಕ್ಷೆ ಬರೆಯುತ್ತಿರುವುದರಿಂದ ಸಾಮಾನ್ಯ ಅಭ್ಯರ್ಥಿಗಳಂತೆ, ಅಂಕಗಳು ಮತ್ತು ಗ್ರೇಡ್ ನೀಡುವ ಸಂಬಂಧ ಏಪ್ರಿಲ್ 2015 ಮತ್ತು ನಂತರದ ಎಸ್.ಎಸ್.ಎಲ್.ಸಿ. ಪರೀಕ್ಷಾ ಫಲಿತಾಂಶಗಳಲ್ಲಿ ಖಾಸಗಿ ವಿದ್ಯಾರ್ಥಿಗಳಿಗೂ ಅಂಕಗಳು ಮತ್ತು ಗ್ರೇಡ್ ನೀಡುವುದು.

**ಉಳಿದ ಅಂಶಗಳು ಯಥಾವತ್ತಾಗಿ ಮುಂದುವರೆಯುತ್ತದೆ.**

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ

(ಐ.ಎಫ್.ಮಾಗಿ)
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಯೋಜನೆ & ಇ-ಆಡಳಿತ)
09/01/2015

ಪ್ರತಿ:

1. ಸಂಕಲನಕಾರರು, ಕರ್ನಾಟಕ ರಾಜ್ಯ ಗೆಜೆಟ್, ಬೆಂಗಳೂರು ಇವರಿಗೆ ವಿಶೇಷ ಗೆಜೆಟ್‌ನಲ್ಲಿ ಪ್ರಕಟಿಸಿ, 500 ಪ್ರತಿಗಳನ್ನು ಸರ್ಕಾರಕ್ಕೆ ಒದಗಿಸಲು ಕೋರಿದೆ.
2. ಮಹಾಲೇಖಪಾಲಕರು, ಕರ್ನಾಟಕ, ಬೆಂಗಳೂರು

3. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
4. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ/ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ, ಬೆಂಗಳೂರು
5. ಅಪರ ಅಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ
6. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗ
7. ನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು
8. ನಿರ್ದೇಶಕರು, ಪ್ರಾಥಮಿಕ ಶಿಕ್ಷಣ/ ಪ್ರೌಢ ಶಿಕ್ಷಣ / ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
9. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಪಠ್ಯ ಪುಸ್ತಕ ಸಂಘ, ಬೆಂಗಳೂರು
10. ಕಾರ್ಯದರ್ಶಿಗಳು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು
11. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ), ಉಪನಿರ್ದೇಶಕರು (ಅಭಿವೃದ್ಧಿ), ಕ್ಷೇತ್ರ ಶಿಕ್ಷಣಾಧಿಕಾರಿಗಳು, ಉಪ ಸಮನ್ವಯಾಧಿಕಾರಿಗಳು(ಎಸ್‌ಎಸ್‌ಎ & ಆರ್‌ಎಂಎಸ್‌ಎ), ಕ್ಷೇತ್ರ ಸಂಪನ್ಮೂಲ ಅಧಿಕಾರಿಗಳು, ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಪ್ರಾಥಮಿಕ, ಪ್ರೌಢ ಶಾಲಾ ಮುಖ್ಯ ಶಿಕ್ಷಕರಿಗೆ ನಿರ್ದೇಶಕರು, ಕ.ಪ್ರೌ.ಶಿ.ಪ.ಮಂ ಮೂಲಕ ನೀಡಲು ತಿಳಿಸಿದೆ.
12. ಸರ್ಕಾರದ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ರವರ ಮಾಹಿತಿಗಾಗಿ ಸಲ್ಲಿಸಿದೆ.
13. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು
14. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ರವರ ಆಪ್ತ ಕಾರ್ಯದರ್ಶಿಗಳು